ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **1092/2025**

| | | |
|---|---|---|
| ಸಾಕ್ಷಿಯ ಹೆಸರುಃ | ಕಾವ್ಯ | ಫ್ರಾಸಾಃಃ 1 |
| ಗಂಡನ ಹೆಸರುಃ | ರವಿಚಂದ್ರ | ಚಾಸಾಃಃ 1 |
| ವಯಸ್ಸುಃ | 27 ವರ್ಷ | ಪ್ರಮಾಣೀಕರಿಸಿದ ದಿಃ |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಹೆಚ್ ಬೋರೇಕೊಪ್ಪಲು, ಪಿರಿಯಾಪಟ್ಟಣ ತಾಲ್ಲೂಕು | |

ಮುಖ್ಯ ವಿಚಾರಣೆಃ ಸಸಅ ರಿಂದಃ

1. ಚಾಸಾ-2 ನನ್ನ ತಂದೆ, ಚಾಸಾ-3 ರಿಂದ 5 ನಮ್ಮ ಊರಿನವರಿರುತ್ತಾರೆ. ಆರೋಪಿತರುಗಳ ಪರಿಚಯ ಇರುತ್ತದೆ. ಅವರು ನಮ್ಮ ಸಂಬಂಧಿಕರಿರುತ್ತಾರೆ. ದಿಃ 04.03.2025 ರಂದು ಮನೆಯ ಮುಂದೆ ಜಗಲಿ ಕೆಲಸ ಮಾಡುತ್ತಿದ್ದಾಗ ಮಧ್ಯಾಹ್ನ ಸುಮಾರು 2.30 ಗಂಟೆಗೆ ನಮ್ಮ ಮುಂದಿನ ಮನೆಯವರಾದ 1 ಮತ್ತು 2 ನೇ ಆರೋಪಿತರುಗಳು ನನ್ನ ತಂದೆ ಚಾಸಾ-2 ರವರ ಜೊತೆ ಜಗಳಕ್ಕೆ ಬಂದು ನನ್ನ ತಂದೆಯನ್ನು ಉದ್ದೇಶಿಸಿ ಬೋಳಿಮಗನೆ, ನೀನು ಮನೆ ಕಟ್ಟಿರುವ ಜಾಗವು ನಮ್ಮದು, ಹೋಗಲಿ ಎಂದು ಮನೆ ಕಟ್ಟಿಕೊಳ್ಳಲು ಬಿಟ್ಟಿದ್ದರೆ ನಮ್ಮ ಟ್ರ್ಯಾಕ್ಟರ್ ತಿರುಗಾಡಲು ತೊಂದರೆ ಕೊಡುವ ಉದ್ದೇಶದಿಂದ ಮನೆ ಮುಂದೆ ಜಗುಲಿಯನ್ನು ಕಟ್ಟಿಸುತ್ತಿದ್ದೀಯಾ ಎಂದು ಅವಾಚ್ಯಶಬ್ದಗಳಿಂದ ಬೈದಿರುತ್ತಾರೆ. ಆ ಸಮಯದಲ್ಲಿ 1 ನೇ ಆರೋಪಿತನು ನನ್ನ ತಂದೆಯನ್ನು ತಬ್ಬಿ ಹಿಡಿದುಕೊಂಡು 2 ನೇ ಆರೋಪಿತನು 1 ದೊಣ್ಣೆಯಿಂದ ನನ್ನ ತಂದೆಯ ತಲೆ ಹಿಂಭಾಗಕ್ಕೆ ಮತ್ತು ಬೆನ್ನಿಗೆ ಹೊಡೆದು ನೋವುಂಟು ಮಾಡಿರುತ್ತಾನೆ. ಆ ಸಮಯದಲ್ಲಿ 3 ರಿಂದ 5 ನೇ ಆರೋಪಿತರುಗಳು ಅಲ್ಲಿಗೆ ಬಂದು ತಮ್ಮ ಕೈಗಳಿಂದ ನನ್ನ ತಂದೆಯ ಮೈ ಕೈಗೆ ಹೊಡೆಯುತ್ತಿದ್ದರು. ಆ ಸಮಯದಲ್ಲಿ ಗಲಾಟೆಯನ್ನು ನಾನು, ಚಾಸಾ-3 ರಿಂದ 5 ರವರು ಸೇರಿ ಜಗಳವನ್ನು ಬಿಡಿಸಿ ಸಮಾಧಾನಪಡಿಸಿದಾಗ 1 ನೇ ಆರೋಪಿತನು ಬೋಳಿಮಗನೇ ನೀನು ಮನೆ ಮುಂದೆ

ಜಗುಲಿ ಕಟ್ಟಿಸಿದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ. ನಂತರ ನಾನು ಆಟೋದಲ್ಲಿ ನನ್ನ ತಂದೆಯನ್ನು ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಹೆಚ್ಚಿನ ಚಿಕಿತ್ಸೆಗಾಗಿ ದಿಃ 07.03.2025 ರಂದು ಕೆಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ.

2. ನಾನು ನನ್ನ ತಂದೆಯೊಂದಿಗೆ ಆಸ್ಪತ್ರೆಯಲ್ಲಿದ್ದುಕೊಂಡು ಚಿಕಿತ್ಸೆ ಕೊಡಿಸುತ್ತಿದ್ದು, ಗಲಾಟೆ ಮಾಡಿದವರು ನಮ್ಮ ಅಕ್ಕ ಪಕ್ಕದವರೇ ಆಗಿದ್ದರಿಂದ ತಡವಾಗಿ ದೂರನ್ನು ದಿಃ 08.03.2025 ರಂದು ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿ ಈ ಬಗ್ಗೆ ತನ್ನ ದೂರು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿಃ 12.03.2025 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಚಾಸಾ-3 ಮತ್ತು 4 ಪಂಚರ ಸಮಕ್ಷಮ ತಯಾರಿಸಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಬಡಿಗೆಯನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 2(ಎ) ಎಂದು ಗುರುತಿಸಲಾಯಿತು. ಬಡಿಗೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುಮ-1 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ 2 ಬಾರಿ ಹೇಳಿಕೆ ನೀಡಿರುತ್ತೇನೆ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಸಸಅ ರವರಿಂದಃ</u>

1. ದಿಃ 04.04.2025 ರಂದು ಪೊಲೀಸರ ಮುಂದೆ ನಾನು ಮರು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಗೆ ಮರುಹೇಳಿಕೆಯನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿರುತ್ತಾರೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

2. ದಿಃ 07.06.2025 ರಂದು ಪೊಲೀಸರ ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಗೆ ಸದರಿ ಹೇಳಿಕೆಯನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿರುತ್ತಾರೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರುಗಳು ನನ್ನ ತಂದೆ ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕೃತ್ಯ ಎಸಗಿರುತ್ತಾರೆ ಎಂದು ಹೇಳಿದ್ದರಿಂದ ಸದರಿ ಪ್ರಕರಣವನ್ನು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ವರ್ಗಾವಣೆ ಮಾಡುವ ಸಲುವಾಗಿ ಅರ್ಜಿ ಹಾಕಲಿರುವುದರಿಂದ ನಂತರ ಚಾಸಾ-1 ರವರ ಪಾಟೀಸವಾಲಿಗೆ ಸಮಯಾವಕಾಶ ನಿಗದಿ ಮಾಡಬೇಕೆಂದು ಕೋರಿದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ